ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 09.07.2024.

**ಪಾಟೀ ಸವಾಲುಃ** 1 ರಿಂದ 3 ಹಾಗೂ 5 ನೇ ಪ್ರತಿವಾದಿಗಳ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ

5 ನೇ ಪ್ರತಿವಾದಿಗೆ ನಾನು ಹೇಳಿದಂತೆ 2000 ಇಸ್ವಿಯಲ್ಲಿ ಆದ ವಾಟ್ನಿಯಲ್ಲಿ ಏನು ಕೊಟ್ಟಿಲ್ಲ ಎಂದರೆ, ಸಾಕ್ಷಿ ರೂ. 2 ಲಕ್ಷ ಹಣ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ನನ್ನ ಸಮಕ್ಷಮ ಕೊಟ್ಟಿಲ್ಲ. ನಿಡಿ-2 ರಲ್ಲಿ 5 ನೇ ಪ್ರತಿವಾದಿ ಸಹಿ ಪಡೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎಲ್ಲರು ಸಹಿ ಮಾಡಿದ ಹಾಗೇ ನಾನು ಕೂಡಾ ನಿಡಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ, ಸಾಕ್ಷಿ ಓದಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ 5 ನೇ ಪ್ರತಿವಾದಿಗೆ ರೂ.2 ಲಕ್ಷ ಹಣ ಕೊಟ್ಟಿದ್ದರ ಬಗ್ಗೆ ಬರೆದಿಲ್ಲ ಎಂದರೆ, ಸಾಕ್ಷಿ ನಾನು ಓದಿ ನೋಡಿಲ್ಲ ಎಂದು ನುಡಿಯುತ್ತಾರೆ. ಈಗ ಓದಿ ನೋಡಿದರೆ ಹೇಳುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ನಿಡಿ-2 ರ ದಾಖಲೆಯನ್ನು ಓದಿ ಹೇಳಲಾಯಿತು, ಅದರಲ್ಲಿ 5 ನೇ ಪ್ರತಿವಾದಿಗೆ ಹಣ ಕೊಟ್ಟ ಬಗ್ಗೆ ಬರೆದಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಕೂಡಾ 5 ನೇ ಪ್ರತಿವಾದಿಗೆ ಹಣ ಕೊಟ್ಟ ಬಗ್ಗೆ ಬರೆದಿಲ್ಲ ಎಂದರೆ ಸರಿ. ನಿಡಿ-2 ರ ಕಾಲಕ್ಕೆ 5 ನೇ ಪ್ರತಿವಾದಿ ಇರಲಿಲ್ಲ ಎಂದರೆ ನಾನು ನೋಡಿಲ್ಲ. ನನ್ನ ಎದುರಿಗೆ 5 ನೇ ಪ್ರತಿವಾದಿ ಬಂದು ಹಣ ಕೊಟ್ಟರೆ ನಾನು ಕೇಳಲ್ಲ ಎಂದು ಹೇಳಿರುತ್ತಾರೆ. ಆ ರೀತಿ ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ 5 ನೇ ಪ್ರತಿವಾದಿ ಎಂದೂ ನನ್ನ ಸಮಕ್ಷಮ ಪಾಲು ಬಿಡುತ್ತೇನೆ ಎಂದು ಹೇಳಿಲ್ಲ ಎಂದುರೆ ಸರಿ. 4 ನೇ ಪ್ರತಿವಾದಿ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ</u>**

(ವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಯಾವುದೇ ಸಕಾರಣ ತೋರಿಸಿರುವುದಿಲ್ಲ, ಕಾರಣ ಪಾಟೀ ಸವಾಲು ಏನು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.)

**<u>ಮರು ವಿಚಾರಣೆಃ</u>** <u>ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.**